ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 97-K**
**Code No. : 97-K**

**C**

**CCE PR**
**NSR & NSPR**

Question Paper Serial No. **100**

ಇಲ್ಲಿಂದ ಕತ್ತರಿಸಿ

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 27. 06. 2022 ] [ Date : 27. 06. 2022
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

### *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : $10 \times 1 = 10$**

1. ಭಾರತದ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರು

   (A) ಸಚ್ಚಿದಾನಂದ ಸಿನ್ಹಾ

   (B) ಡಾ. ಬಿ.ಆರ್. ಅಂಬೇಡ್ಕರ್

   (C) ಡಾ. ಬಾಬು ರಾಜೇಂದ್ರ ಪ್ರಸಾದ್

   (D) ಸರ್ದಾರ್ ವಲ್ಲಭಭಾಯಿ ಪಟೇಲ್

2. ಸಂವಿಧಾನ ರಚನೆಗಾಗಿ ರಚಿಸಲಾದ ಒಟ್ಟು ಸಮಿತಿಗಳು

   (A) 18

   (B) 20

   (C) 22

   (D) 25

3. ಭಾರತದ ಸಂವಿಧಾನ ಪ್ರಸ್ತಾವನೆಗೆ ಆಧಾರವಾಗಿರುವುದು

(A) ಅಮೆರಿಕದ ಸಂವಿಧಾನ

(B) ಇಂಗ್ಲೆಂಡ್‌ನ ಸಂವಿಧಾನ

(C) ಕೆನಡಾದ ಸಂವಿಧಾನ

(D) ಐರ್ಲೆಂಡ್ ಸಂವಿಧಾನ

4. "ಪ್ರಸ್ತಾವನೆ ಸಂವಿಧಾನದ ಸತ್ಯ, ಇದು ಸಂವಿಧಾನದ ಯೋಗ್ಯತೆಯನ್ನು ಅಳೆಯಲು ಇರುವ ಒಂದು ಅಳತೆಗೋಲು'' ಎಂದು ಹೇಳಿದವರು

(A) ಎನ್.ಎ. ಪಾಲ್ಕಿವಾಲ

(B) ಕೆ.ಎಂ. ಮುನ್ಷಿ

(C) ಜವಾಹರಲಾಲ ನೆಹರೂ

(D) ಠಾಕೂರ್‌ದಾಸ್ ಭಾರ್ಗವ್

5. 32 ನೇ ವಿಧಿಯು ಭಾರತದ ಸಂವಿಧಾನದ "ಆತ್ಮ ಮತ್ತು ಹೃದಯ" ಎಂದು ಹೇಳಿದವರು

(A) ಜವಾಹರಲಾಲ ನೆಹರೂ

(B) ಮಹಾತ್ಮ ಗಾಂಧಿ

(C) ಬಿ.ಆರ್. ಅಂಬೇಡ್ಕರ್

(D) ಕೆ.ಎಂ. ಮುನ್ಷಿ

6. ಭಾರತದ ಸಂಸತ್ತು ಮಾಹಿತಿ ಹಕ್ಕು ಕಾಯ್ದೆಯನ್ನು ರಚಿಸಿದ ವರ್ಷ

(A) 2005

(B) 2008

(C) 2011

(D) 2014

7. ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ

(A) ಲೋಕ ಅದಾಲತ್

(B) ಸೆಷನ್ಸ್ ನ್ಯಾಯಾಲಯ

(C) ಸಿವಿಲ್ ನ್ಯಾಯಾಲಯ

(D) ಉಚ್ಚ ನ್ಯಾಯಾಲಯ

8. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು

(A) 62 ವರ್ಷ

(B) 63 ವರ್ಷ

(C) 64 ವರ್ಷ

(D) 65 ವರ್ಷ

9. ಕರ್ನಾಟಕದ ಪಂಚಾಯತ್‌ರಾಜ್ ವ್ಯವಸ್ಥೆಯ ಪಿತಾಮಹ

(A) ಎಂ.ವೈ. ಘೋರ್ಪಡೆ

(B) ಅಬ್ದುಲ್ ನಜೀರ್ ಸಾಬ್

(C) ರಾಮಕೃಷ್ಣ ಹೆಗಡೆ

(D) ಎಂ.ಪಿ. ಪ್ರಕಾಶ್

10. ಕರ್ನಾಟಕ ರಾಜ್ಯ ಲೋಕ ಸೇವಾ ಆಯೋಗದ ಕೇಂದ್ರ ಕಛೇರಿ ಇರುವ ಸ್ಥಳ

(A) ಬೆಳಗಾವಿ

(B) ಬೆಂಗಳೂರು

(C) ಮೈಸೂರು

(D) ಕಲಬುರಗಿ

**II. 11. *A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) 73 ನೇ ಸಂವಿಧಾನ ತಿದ್ದುಪಡಿ | (i) ಪಕ್ಷಾಧಾರಿತ ಚುನಾವಣೆ |
| (B) 74 ನೇ ಸಂವಿಧಾನ ತಿದ್ದುಪಡಿ | (ii) ಪಕ್ಷರಹಿತ ಚುನಾವಣೆ |
| (C) ಗ್ರಾಮ ಪಂಚಾಯಿತಿ | (iii) ಗ್ರಾಮೀಣ ಸ್ಥಳೀಯ ಸಂಸ್ಥೆಗಳು |
| (D) ಜಿಲ್ಲಾ ಪಂಚಾಯಿತಿ | (iv) ನಗರ ಸ್ಥಳೀಯ ಸಂಸ್ಥೆಗಳು |
| (E) ಜಿಲ್ಲಾ ಪಂಚಾಯಿತಿ ಆಡಳಿತ ಮುಖ್ಯಸ್ಥ | (v) ಆಯುಕ್ತರು |
| | (vi) ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ |
| | (vii) ಪಂಚಾಯತ್ ಅಭಿವೃದ್ಧಿ ಅಧಿಕಾರಿ |

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಏಕ ಪೌರತ್ವ ಎಂದರೇನು ?

13. ಭಾರತದ ಸಂವಿಧಾನದ ರಚನಾ ಸಭೆಯ ಅಧ್ಯಕ್ಷರು ಯಾರು ?

14. ವಿಶ್ವದ ಅತ್ಯಂತ ದೊಡ್ಡ ರಾಷ್ಟ್ರೀಯ ಸಂವಿಧಾನ ಯಾವುದು ?

15. ಪ್ರಜಾಪ್ರಭುತ್ವ ಎಂದರೇನು ?

16. ಸಂವಿಧಾನ ರಚನಾ ಸಭೆಯಲ್ಲಿ ಧ್ಯೇಯ ನಿರ್ಣಯವನ್ನು ಯಾರು ಮಂಡಿಸಿದರು ?

17. ಗಣರಾಜ್ಯ ಎಂದರೇನು ?

18. ಮೂಲಭೂತ ಹಕ್ಕುಗಳ ಅಧ್ಯಾಯದ ಬೆನ್ನೆಲುಬು ಯಾವುದು ?

19. ಮೂಲಭೂತ ಹಕ್ಕುಗಳ ಗೊತ್ತುವಳಿಯನ್ನು ಯಾವ ಅಧಿವೇಶನದಲ್ಲಿ ಮಂಡಿಸಲಾಗಿತ್ತು ?

20. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಯಾರು ನೇಮಕ ಮಾಡುತ್ತಾರೆ ?

21. ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ವಿಧಾನ ಯಾವುದು ?

22. ಮಹಾನಗರ ಪಾಲಿಕೆಯ ಸದಸ್ಯರನ್ನು ಏನೆಂದು ಕರೆಯುತ್ತಾರೆ ?

23. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರಥಮವಾಗಿ ಅಳವಡಿಸಿಕೊಂಡ ರಾಜ್ಯ ಯಾವುದು ?

24. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

25. ಉದಾರವಾದಿ ತತ್ವಗಳೆಂದರೇನು ?

26. ಸಂವಿಧಾನದ ಮ್ಯಾಗ್ನಾಕಾರ್ಟ ಎಂದು ಯಾವುದನ್ನು ಕರೆಯಲಾಗಿದೆ ?

**IV. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. 1935 ರ ಭಾರತ ಸರ್ಕಾರದ ಕಾಯ್ದೆಯಿಂದ ಎರವಲು ಪಡೆಯಲಾದ ಅಂಶಗಳಾವುವು ?

28. ಸಂಸದೀಯ ಮಾದರಿ ಸರ್ಕಾರ ಎಂದರೇನು ?

29. ಭ್ರಾತೃತ್ವದ ಅಗತ್ಯವೇನು ?

30. ನ್ಯಾಯದ ವಿಧಗಳಾವುವು ?

31. ಮೂಲಭೂತ ಹಕ್ಕುಗಳ ಲಕ್ಷಣಗಳೇನು ?

32. ಮಾಹಿತಿ ಹಕ್ಕು ಕಾಯ್ದೆಯ ಮಹತ್ವವೇನು ?

33. ಸಮಾಜವಾದಿ ತತ್ವಗಳ ಪರಿಣಾಮಕಾರಿ ಅನುಷ್ಠಾನವು ಸಾಮಾಜಿಕ ನ್ಯಾಯವನ್ನು ದೊರಕಿಸುತ್ತದೆ. ಹೇಗೆ ?

34. ರಾಜ್ಯ ನಿರ್ದೇಶಕ ತತ್ವಗಳು ಭಾರತದ ಸಂವಿಧಾನದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಏಕೆ ?

35. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ ?

36. ಮೂಲಭೂತ ಹಕ್ಕುಗಳ ರಕ್ಷಣೆಗೆ ಹೊರಡಿಸಬಹುದಾದ ವಿಶೇಷ ಆಜ್ಞೆಗಳಾವುವು ?

37. ನಗರ ಸ್ಥಳೀಯ ಸಂಸ್ಥೆಗಳ ವರ್ಗೀಕರಣವನ್ನು ತಿಳಿಸಿ.

38. ಗ್ರಾಮ ಪಂಚಾಯಿತಿ ಸ್ಥಾಯೀ ಸಮಿತಿಗಳನ್ನು ಹೆಸರಿಸಿ.

39. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

40. ಜಂಟಿ ಲೋಕ ಸೇವಾ ಆಯೋಗ ಎಂದರೇನು ?

41. ದೇಶೀಯ ಸಂಸ್ಥಾನಗಳ ವಿಲೀನ ಸಮಯದಲ್ಲಿ ಅವುಗಳಿಗೆ ನೀಡಲಾದ ಆಯ್ಕೆಗಳಾವುವು ?

42. ಭಾರತದ ರಾಜಕೀಯ ಪದ್ಧತಿಯ ತಾತ್ವಿಕ ಸ್ತಂಭಗಳನ್ನು ಹೆಸರಿಸಿ.

43. ಶೋಷಣೆಯ ವಿರುದ್ಧ ಹಕ್ಕಿನ ಮಹತ್ವವೇನು ?

44. ಶಿಕ್ಷಣ ಹಕ್ಕು ಕಾಯ್ದೆಯ ಮುಖ್ಯಾಂಶಗಳಾವುವು ?

45. ಉದಾರವಾದಿ ತತ್ವಗಳನ್ನು ತಿಳಿಸಿ.

46. ಗಾಂಧಿವಾದದ ತತ್ವಗಳು ಯಾವುವು ?

47. ನ್ಯಾಯಿಕ ವಿಮರ್ಶೆ ಎಂದರೇನು ?

48. ಗ್ರಾಮ ಸಭೆಯ ಮಹತ್ವದ ಜವಾಬ್ದಾರಿಗಳಾವುವು ?

49. ಕಂಟೋನ್ಮೆಂಟ್ ಬೋರ್ಡ್‌ಗಳೆಂದರೇನು ?

50. ಲೋಕಸೇವಾ ಆಯೋಗದ ವಿಧಗಳನ್ನು ತಿಳಿಸಿ.

**V. ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 6 × 3 = 18**

51. ಪ್ರಸ್ತಾವನೆಯ ಮುಖ್ಯಾಂಶಗಳನ್ನು ತಿಳಿಸಿ.

52. ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೂಲಭೂತ ಹಕ್ಕುಗಳನ್ನು ಪಟ್ಟಿಮಾಡಿ.

53. ಮೂಲಭೂತ ಹಕ್ಕುಗಳು ಹಾಗೂ ರಾಜ್ಯ ನಿರ್ದೇಶಕ ತತ್ವಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿಮಾಡಿ.

54. ಉಚ್ಚ ನ್ಯಾಯಾಲಯದ ಮೂಲ ಅಧಿಕಾರಗಳನ್ನು ತಿಳಿಸಿ.

55. ಜಿಲ್ಲಾ ಪಂಚಾಯಿತಿಯಲ್ಲಿರುವ ಸ್ಥಾಯೀ ಸಮಿತಿಗಳಾವುವು ?

56. ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ಪಟ್ಟಿಮಾಡಿ.

**VI. ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ : 1 × 4 = 4**

57. ಭಾರತ ಸಂವಿಧಾನದ ವಿಶಿಷ್ಟ ಲಕ್ಷಣಗಳಾವುವು ?